

## ರೊಬೋಟ್ ಎಂದರೆ...

'ರೊಬೋಟಾ' ಎಂಬ ಜೆಕ್ ಶಬ್ದದಿಂದ ಹುಟ್ಟಿದ್ದು 'ಬಲವಂತದ ಕೆಲಸ' ಎಂಬ ಅರ್ಥವಂತೆ. ಈಗ ಆಗಿರುವುದೂ ಅದೇ. ರಿಮೋಟ್ ಹಿಡಿದುಕೊಂಡ ಮಾನವ ಯಂತ್ರಮಾನವನಿಂದ ಬೇಕಾದ ಕೆಲಸಗಳನ್ನೆಲ್ಲ ಮಾಡಿಸಿಕೊಳ್ಳುತ್ತಿದ್ದಾನೆ. ಹಲವರಿಗೆ ರೊಬೋಟ್ ಎಂದರೆ 'ಸ್ಟಾರ್‌ವಾರ್', 'ಟರ್ಮಿನೇಟರ್' ಸಿನಿಮಾಗಳ ಆ್ಯಂಡ್ರಾಯ್ಡ್ಸ್. ಇನ್ನು ಕೆಲವರಿಗೆ ವಾಹನ, ವೈದ್ಯಕೀಯ, ತಯಾರಿಕಾ, ಅಂತರಿಕ್ಷದಲ್ಲಿ ಅಪಾಯಕಾರಿ ಕೆಲಸ ಮಾಡುವಂತಹ ಯಂತ್ರಗಳು. ಆದರೆ ರೊಬೋಟ್‌ನಲ್ಲಿ ಮುಖ್ಯವಾಗಿರುವುದು ಸೆನ್ಸಿಂಗ್. ಸುತ್ತಲಿನ ಪರಿಸರ ಅರಿತುಕೊಳ್ಳುವ ಶಕ್ತಿ. ಲೈಟ್ ಸೆನ್ಸರ್, ಹ್ಯಾಂಡ್ ಸೆನ್ಸರ್, ಮೂಗು, ನಾಲಗೆ... ಹೀಗೆ ಅದರ ವಿವಿಧ ಭಾಗಗಳು ಸುತ್ತಲಿನ ವಾತಾವರಣ ತಿಳಿದುಕೊಳ್ಳುತ್ತವೆ. ಇನ್ನೊಂದು ಚಲನೆ. ಗಾಲಿಗಳು, ಕಾಲುಗಳ ಮೂಲಕ ಚಲಿಸುತ್ತದೆ. ಅಥವಾ ಅದರ ಯಾವುದಾದರೂ ಒಂದು ಭಾಗ ಚಲಿಸುತ್ತದೆ. ಇನ್ನೊಂದು ಶಕ್ತಿ. ಸೌರಶಕ್ತಿ, ವಿದ್ಯುತ್, ಬ್ಯಾಟರಿ ಮೂಲಕ ಪಡೆಯುತ್ತದೆ. ಇನ್ನೊಂದು ಮುಖ್ಯವಾದ ಅಂಶ ಬುದ್ಧಿಮತ್ತೆ. ಇದನ್ನು ಪ್ರೋಗ್ರಾಮಿಂಗ್ ಮೂಲಕ ನೀಡಬೇಕಾಗುತ್ತದೆ.

ಮನೆಗಳಲ್ಲೂ ಸ್ಥಾನ ಪಡೆದಿವೆ. ತೀವ್ರ ಮಾನವ ಸಂಪನ್ಮೂಲ ಕೊರತೆ ಎದುರಿಸುತ್ತಿರುವ, ವೃದ್ಧರ ಸಂಖ್ಯೆ ಏರುತ್ತಿರುವ ಜಪಾನಿನಲ್ಲಿ ಹೊಟೇಲ್‌ಗಳಲ್ಲಿ ಪರಿಚಾರಕರಾಗಿ, ವೃದ್ಧಾಶ್ರಮದಲ್ಲಿ ಸಂಗಾತಿಗಳಾಗಿ, ನೆರವು ನೀಡುವ ಸಹಾಯಕರಂತೆ ರೊಬೋಟ್‌ಗಳ ಬಳಕೆ ದೊಡ್ಡ ಪ್ರಮಾಣದಲ್ಲಿ ಶುರುವಾಗಿದೆ. ವೈದ್ಯಕೀಯ ಕ್ಷೇತ್ರದಲ್ಲಂತೂ ಇವುಗಳ ವ್ಯಾಪಕ ಬಳಕೆಯಿದೆ. ರೋಗ ಪತ್ತೆಯಲ್ಲಿ, ಶಸ್ತ್ರಚಿಕಿತ್ಸೆಯಲ್ಲಿ ದೊಡ್ಡ ಪ್ರಮಾಣದಲ್ಲೇ ಬಳಸಲಾಗುತ್ತಿದೆ. ಶಾಲೆಗಳಲ್ಲಿ ಶೈಕ್ಷಣಿಕ ಟೂಲ್ ಆಗಿ ಇದನ್ನು ಬಳಸಲಾಗುತ್ತಿದೆ. ಅಂತರಿಕ್ಷದಲ್ಲಿ ಹುಡುಕಾಟಕ್ಕೆ, ಮಂಗಳನ ಅಂಗಳದಲ್ಲಿ ಅಧ್ಯಯನಕ್ಕೆ ಬಳಕೆಯಾಗಿದ್ದು ಇದೇ ರೊಬೋಟ್ ಎಂಬ ಯಂತ್ರಮಾನವ.

ಹೀಗೆ ಹಂತ ಹಂತವಾಗಿ ಬೆಳೆದ ಕೃತಕ ಬುದ್ಧಿಮತ್ತೆ ಒಂಟಿ ವ್ಯಕ್ತಿಯ ಸಂಗಾತಿಯಾಗುವವರೆಗೂ ಬಂದು ನಿಂತಿದೆ! ಈಗಾಗಲೇ ಅಂತರ್ಜಾಲ, ಸಾಮಾಜಿಕ ಜಾಲತಾಣಗಳ ನಡುವೆ ಕಳೆದು ಹೋಗಿದ್ದಾನೆ ಮನುಷ್ಯ. ವ್ಯಕ್ತಿಗಳ ನಡುವಿನ ಸಂಬಂಧದ ತಂತು ಕಡಿದು ಹೋಗುತ್ತಿದೆ. ಸಮಾಜದ ಜೊತೆಗಿನ ಸಂಪರ್ಕದ ಸೇತು ಮುರಿದು ಬೀಳುತ್ತಿದೆ. ಕುಟುಂಬ, ಸ್ನೇಹಿತರು ಎಂಬುದು ಸಾಮಾಜಿಕ ಜಾಲತಾಣಗಳಲ್ಲಿ ಫ್ಯಾಷನ್ನಿಗೆ ಬಳಸುವ ಸವಕಲು ಪದಗಳಾಗುತ್ತಿವೆ. ಹೀಗಿರುವಾಗ ಜೀವದಿಂದ ಪುಟಿಯುವ ವ್ಯಕ್ತಿಯ ಜಾಗವನ್ನು ಅಲ್ಗಾರ್ದಮ್‌ಗಳ ಗೋಜಲಿನಲ್ಲಿ ಎದ್ದು ಬಂದ ಒಂದು ರೊಬೋಟ್ ಕಸಿದುಕೊಳ್ಳಲು ಸಾಧ್ಯವೇ?

ಆದರೆ ಐಕ್ಯು (ಇಂಟೆಲಿಜೆನ್ಸ್ ಕೋಶಂಟ್), ಇಕ್ಯು (ಎಮೋಷನಲ್ ಕೋಶಂಟ್) ಹೊಂದಿರುವ ರೊಬೋಟ್‌ಗಳು ಮಾರುಕಟ್ಟೆಗೆ ದಾಂಗುಡಿಯಿಡುತ್ತಿದ್ದು ಈ ಕೃತಕ ಬುದ್ಧಿಮತ್ತೆಯ ಬಗ್ಗೆ ಸಾಂಪ್ರದಾಯಕವಾಗಿ ಯೋಚಿಸುವ ಕಾಲಘಟ್ಟ ಇತಿಹಾಸ ಸೇರಿಬಿಟ್ಟಿದೆ. ಶೀಘ್ರದಲ್ಲೇ ನಮ್ಮನ್ನು ಕೇವಲ ಸಿಬ್ಬಂದಿಗಳ ಸ್ಥಾನಕ್ಕೆ ನೂಕಿ ಮ್ಯಾನೇಜರ್ ಕುರ್ಚಿಯನ್ನು ಆಕ್ರಮಿಸಲಿವೆ ಈ ರೊಬೋಟ್‌ಗಳು ಎನ್ನುತ್ತಾರೆ ವಿಶ್ಲೇಷಕರು. ಅಮೆರಿಕದ ಆ್ಯಂಕಿ ಕಂಪನಿ ಹೊರ ತಂದಿರುವ 'ವೆಕ್ಟರ್' ಎಂಬ ರೊಬೋಟ್ ಈ ಮಾತಿಗೆ ಪುಷ್ಟಿ ನೀಡುತ್ತದೆ. ಸಂಪೂರ್ಣ ಸ್ವಯಂಚಾಲಿತವಾಗಿದ್ದು, ಕ್ಲೌಡ್ ಸಂಪರ್ಕ ಕೂಡ ಹೊಂದಿರುವ ವೆಕ್ಟರ್ ಇಡೀ ಮನೆಯನ್ನು ಮಾತ್ರವಲ್ಲ, ತನ್ನ ಯಜಮಾನನ ಸ್ವಭಾವವನ್ನು ಕೂಡ ವಿಶ್ಲೇಷಿಸಿ ಪ್ರತಿಕ್ರಿಯೆ ನೀಡಬಲ್ಲದು. ಎಷ್ಟೆಂದರೆ ಯಜಮಾನ ಜೋರಾಗಿ ಕರೆಗಂಟೆ ಸದ್ದು ಮಾಡಿದರೆ ಅದಕ್ಕೆ ಕಿರಿಕಿರಿಯಾಗಿ ಪ್ರತಿಕ್ರಿಯಿಸಬಲ್ಲದು. ಅಮೆಝಾನ್‌ನ 'ಅಲೆಕ್ಸಾ'ಗಿಂತಲೂ ಒಂದು ಹೆಜ್ಜೆ ಮುಂದಿದೆ ಈ ವೆಕ್ಟರ್.